ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಇರ್ಶಾದ್ ಬೇಗ್ -ವಿರುದ್ಧ ಚೌರಮ್ಮ ಮತ್ತು ಇತರರು

ನಿಯತ ಮೊದಲ ಅಪೀಲುಸಂಖ್ಯೆ: 34/2015, ದಿನಾಂಕ 28 ನೇ ನವೆಂಬರ್, 2018.

ತೀರ್ಪು

ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್:

ಅಪೀಲಿಗೆ ಅನುಮತಿ ನೀಡುವ ಸಮಯದಲ್ಲಿ ಅಪೀಲುದಾರರ ಪರ ನ್ಯಾಯವಾದಿ ಹಾಗೂ ಪ್ರತಿವಾದಿದಾರರಸಂಖ್ಯೆ: 8 ಇವರ ಪರ ಮಾನ್ಯ ನ್ಯಾಯವಾದಿ ಇವರ ಅಹವಾಲುಗಳನ್ನು ಆಲಿಸಲಾಯಿತು.

2. XXVIII ನೇ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಧೀಶರು, ಮೇಯೊ ಹಾಲ್, ಬೆಂಗಳೂರು ಇವರ ಕಡತದಲ್ಲಿನ ಒ.ಎಸ್.ಸಂಖ್ಯೆ: 27217/2011 ರಲ್ಲಿನ ವಾದಿಯು, ಪ್ರತಿವಾದಿಸಂಖ್ಯೆ: 08 ಇವರು, ಕ್ರಮಾದೇಶಸಂಖ್ಯೆ: VII ರ ಅಡಿಯಲ್ಲಿ 11 (   ಎ) ಮತ್ತು (ಡಿ) ನಿಯಮದ ಸಲ್ಲಿಸಿದ ಅರ್ಜಿಯಲ್ಲಿ ಹೊರಡಿಸಿದದಿನಾಂಕ: 22.09.2014 ರ ಆದೇಶದಿಂದ ಬಾಧಿತನಾಗಿ ಈ ಅಪೀಲನ್ನು ಹೂಡಿದ್ದಾನೆ.

3. ಈ ಕೆಳಗಿನ ಪರಿಹಾರಗಳಿಗಾಗಿ ಅಪೀಲುದಾರನು ದಾವೆ ಹೂಡಿದ್ದಾನೆ:

"ಎ) ಪ್ರತಿವಾದಿಸಂಖ್ಯೆ: ಈತನ ಪರವಾಗಿ ಪ್ರತಿವಾದಿಸಂಖ್ಯೆ: 1 ರಿಂದ 6 ಇವರುದಿನಾಂಕ: 01.03.2008 ರಂದು ಬರೆದುಕೊಟ್ಟ ಕ್ರಯಪತ್ರವು ದಾವೆ ನಿಗದಿತ ಸ್ವತ್ತಿನ ಸಂಬಂಧದಲ್ಲಿ ವಾದಿಯ ಮೇಲೆ ಬಂಧನಕಾರಿಯಾಗಿರುವುದಿಲ್ಲ ಎಂದು ಘೋಷಿಸುವುದು;

ಬಿ) ಸರ್ವೆಸಂಖ್ಯೆ: 18, ಮೇಲೆನಹಳ್ಳಿ ಗ್ರಾಮ, ಚಂದ್ರಶೇಖರಪುರ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಇಲ್ಲಿರುವ ದಾವೆ ನಿಗದಿತ ಸ್ವತ್ತನ್ನು ಪರಭಾರೆ ಮಾಡುವುದರಿಂದ ಅಥವಾ ಪೂರ್ವಾಧಿ ಹೊರಿಸುವುದರಿಂದ ಮೂರನೆಯ ಪಕ್ಷಕಾರನ ವಶವನ್ನು ಸೃಜಿಸುವುದರಿಂದ ಪ್ರತಿವಾದಿಗಳನ್ನು ಅವರ ಮೂಲಕ ಕ್ಲೇಮು ಮಾಡುವ ಯಾರನ್ನಾದರೂ ನಿಗ್ರಹಿಸಲು ಶಾಶ್ವತ ನಿರ್ಬಂಧಕಾಜ್ಞೆ ನೀಡುವುದು ".

4. ವಾದಿಯು ತಾನು ಬೆಲೆಯುಳ್ಳ ಪ್ರತಿಫಲಕ್ಕಾಗಿ ಪ್ರತಿವಾದಿಸಂಖ್ಯೆ: 1 ರಿಂದ 6 ಇವರುಗಳಿಂದ ದಾವೆ ನಿಗದಿತ ಸ್ವತ್ತನ್ನು ಖರೀದಿಸಿದ್ದು, ತಾನು ಸದರಿ ಸ್ವತ್ತಿನ ನಿರುಪಾಧಿಕ ಮಾಲಿಕನೆಂದು; ಪ್ರತಿವಾದಿಸಂಖ್ಯೆ: 1 ರಿಂದ 6 ಇವರುದಿನಾಂಕ: 8.12.1993 ರಂದು ಮಾರಾಟ ಪ್ರತಿಫಲ ಮೊತ್ತವನ್ನು ಸ್ವೀಕರಿಸುವ ಮೂಲಕ ವಾದಿಯ ಹೆಸರಿಗೆ 3,24,000/- ರೂ.ಗಳ ಮಾರಾಟ ಒಪ್ಪಂದ ಪತ್ರವನ್ನು ಬರೆದುಕೊಟ್ಟಿದ್ದು ಅದೇ ದಿನದಂದು ತನ್ನ ಹೆಸರಿಗೆ ಮುಖ್ತ್ಯಾರನಾಮೆಯನ್ನು ಕೂಡಾ ಬರೆದುಕೊಟ್ಟಿದ್ದಾರೆಂದು ವಾದಿಸಿದ್ದಾನೆ.ವಾದಿಯ ಪ್ರಕಾರ, ಪ್ರತಿವಾದಿಸಂಖ್ಯೆ: 1 ರಿಂದ 6 ಇವರು ಬರೆದುಕೊಟ್ಟ ಮುಖ್ತ್ಯಾರನಾಮೆಯು ಹಿತಾಸಕ್ತಿಯಿಂದ ಕೂಡಿರುವುದರಿಂದ ರದ್ದುಗೊಳಿಸಲಾಗದ್ದಾಗಿದೆ ಹಾಗೂ ವಾದಿಯು ಇಡೀ ಪ್ರತಿಫಲ ಮೊತ್ತವನ್ನು ಪಾವತಿ ಮಾಡಿದ್ದು ಆತನು ದಾವೆ ನಿಗದಿತ ಸ್ವತ್ತಿನ ಸ್ವಾಧೀನವನ್ನು ಸಹ ಹೊಂದಿದ್ದಾನೆ.ರಾಜ್ಯ ಸರ್ಕಾರವು ವಿಧಿಸಿದ ನಿರ್ಬಂಧಗಳ ಕಾರಣದಿಂದಾಗಿ ಕ್ರಯಪತ್ರವನ್ನು ನೋಂದಾಯಿಸಿರುವುದಿಲ್ಲ.ಸ್ಥಿತಿಗತಿ ಹೀಗಿರುವಾಗ ಪ್ರತಿವಾದಿಗಳು ತಮ್ಮ ಅನುಯಾಯಿಗಳ ಜೊತೆ ದಾವೆ ನಿಗದಿತ ಸ್ವತ್ತಿನ ಬಳಿ ಬಂದು, ಕೂಡಲೇ ದಾವೆ ನಿಗದಿತ

ಸ್ವತ್ತನ್ನು ಖಾಲಿ ಮಾಡುವಂತೆ ಬೆದರಿಸಿ ಹೇಳಿದಾಗ, ವಾದಿಯು ಆಘಾತಗೊಂಡಿದ್ದಾರೆ ಮತ್ತು ಆಶ್ಚರ್ಯಗೊಂಡಿದ್ದಾರೆ.ವಿಚಾರಣೆಯ ನಂತರ, ಸದರಿ ಸರ್ವೆ ಸಂಖ್ಯೆಯಲ್ಲಿ 06 ಎಕರೆ 29 ಗುಂಟೆಗಳ ಭೂಮಿಗೆ ಸಂಬಂಧಿಸಿದಂತೆ ಪ್ರತಿವಾದಿಸಂಖ್ಯೆ: 01 ರಿಂದ 06 ಇವರು, ಥಣಿಗ ಮಲ್ಯೆ ಎಂಬಾತನ ಹೆಸರಿಗೆ ಸಾಮಾನ್ಯ ಮುಖಾನಾರ್ಮೆಯನ್ನು ಬರೆದುಕೊಟ್ಟಿದ್ದು, ಪ್ರತಿಯಾಗಿ ಆತನು,ದಿನಾಂಕ: 14.03.2008 ರಂದು ಕೃಷ್ಣಮೂರ್ತಿ ಹೆಸರಿಗೆ ಅಂದರೆ ಪ್ರತಿವಾದಿಸಂಖ್ಯೆ: 07 ಈತನ ಹೆಸರಿಗೆ ಸಾಮಾನ್ಯ ಮುಖಾನಾರ್ಮೆಯನ್ನು ಬರೆದುಕೊಟ್ಟಿರುವನೆಂದು ವಾದಿಗೆ ತಿಳಿದುಬಂದಿತು.ವಾದಿಯು ದಾವೆ ನಿಗದಿತ ಸ್ವತ್ತನ್ನು ಪ್ರತಿವಾದಿಸಂಖ್ಯೆ: 1 ರಿಂದ 6 ಇವರಿಂದ ಖರೀದಿಸಿದ್ದರಿಂದ, ಪ್ರತಿವಾದಿಸಂಖ್ಯೆ: 07 ಇವರು ಯಾವುದೇ ಸ್ವಾಮ್ಯವನ್ನು ಪಡೆಯುವುದಿಲ್ಲ; ಆದುದರಿಂದ,ದಿನಾಂಕ: 14.03.2008 ರ ಕ್ರಯಪತ್ರವು ಆತನ ಮೇಲೆ ಬಂಧನಕಾರಿಯಾಗುವುದಿಲ್ಲವೆಂದು ಘೋಷಿಸಬೇಕು ಎಂದು ವಾದಿಯು ಹೇಳಿದ್ದಾನೆ.

5. ದಾವೆಯು ಇತ್ಯರ್ಥದಲ್ಲಿದ್ದ ಅವಧಿಯಲ್ಲಿ, ವಾದಪತ್ರವು ವ್ಯಾಜ್ಯಕಾರಣವನ್ನು ಬಹಿರಂಗಗೊಳಿಸುವುದಿಲ್ಲವೆಂದು, ದಾವೆಯನ್ನು ನಿರ್ದಿಷ್ಟ ಪರಿಹಾರ ಅಧಿನಿಯಮ, 1963 ರ 41 (ಎಚ್) ಪ್ರಕರಣದ ಅಡಿಯಲ್ಲಿ ಸಾಧಿಸಲಾಯಿತು ಎಂದು ಹಾಗೂ ದಾವೆಯು ಅವಧಿ ಮೀರಿದ್ದೆಂದು ವಾದಿಸಿ, ಕ್ರಮಾದೇಶ-VII ರ 11 ( ಎ) ಮತ್ತು (ಡಿ) ನಿಯಮದ ಅಡಿಯಲ್ಲಿ, ಪ್ರತಿವಾದಿಸಂಖ್ಯೆ: 08 ಇವರು ಅರ್ಜಿ ಸಲ್ಲಿಸಿದ್ದರು.ವಿಚಾರಣಾ ನ್ಯಾಯಾಲಯವು ಈ ಅರ್ಜಿಗೆ ಅನುಮತಿ ನೀಡಿ, ವಾದಪತ್ರವನ್ನು ತಿರಸ್ಕರಿಸಿತು.

6. ಅಪೀಲುದಾರ ಪರ ಮಾನ್ಯ ನ್ಯಾಯವಾದಿಗಳು, ಮಿತಿಯು ಕಾನೂನು ಮತ್ತು ಸಂಗತಿಗಳ ಸಮ್ಮಿಶ್ರ ಪ್ರಶ್ನೆಯಾಗಿರುತ್ತದೆ ಎಂದು ವಾದಿಸಿದ್ದಾರೆ.ಪ್ರತಿವಾದಿಸಂಖ್ಯೆ: 07 ಈತನು, 2011 ರ ಆಗಸ್ಟ್ ಎ ಮೊದಲ ವಾರದಲ್ಲಿ ಹಾಗೂ ಇತರ ನಿರ್ದಿಷ್ಟ ದಿನಾಂಕಗಳಂದು ತನ್ನ ಹೆಸರಿಗೆ ಹಕ್ಕು ಬದಲಾವಣೆ ಪಡೆಯಲು ಪ್ರಯತ್ನ ಮಾಡಿದ ಬಗ್ಗೆ ವಾದಿಗೆ ತಿಳಿದಾಗ, ವ್ಯಾಜ್ಯಕಾರಣ ಉದ್ಭವಿಸಿತೆಂದು ವಾದ ಪತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.ಘೋಷಣಾತ್ಮಕ ಪರಿಹಾರಕ್ಕೆ ಸಂಬಂಧಿಸಿದಷ್ಟರ ಮಟ್ಟಿಗೆ, ತಿಳಿದುಬಂದ ದಿನಾಂಕವು ಮಹತ್ವದ್ದಾಗಿರುತ್ತದೆ ಎಂದು ಅವರು ವಾದಿಸಿದ್ದಾರೆ.ಕ್ರಯಪತ್ರವನ್ನುದಿನಾಂಕ: 14.3.2008 ರಂದು ಬರೆದುಕೊಟ್ಟಿದ್ದಾಗ್ಯೂ, 2011 ರ ಆಗಸ್ಟ್ ಎ ಮೊದಲ ವಾರದಲ್ಲಿ ಪ್ರತಿವಾದಿಸಂಖ್ಯೆ: 07 ಈತನ ಹೆಸರಿಗೆ ಕ್ರಯಪತ್ರವನ್ನು ಬರೆದುಕೊಡಲಾಗಿದೆ ಎಂದು ವಾದಿಗೆ ತಿಳಿದುಬಂದಿದ್ದರಿಂದ, ತಿಳುವಳಿಕೆಗೆ ಬಂದ ದಿನಾಂಕದಿಂದ ದಾವೆಯು ಸಮಯದ ಮಿತಿಯೊಳಗೆ ಇತ್ತು. ತಿಳುವಳಿಕೆಗೆ ಬಂದ ದಿನಾಂಕಕ್ಕೆ ಸಂಬಂಧಪಟ್ಟ ಹಾಗೆ ವಾದಿಯು ಒದಗಿಸಿದಂಥ ಸಾಕ್ಷ್ಯವನ್ನು ಪ್ರತಿವಾದಿಯು ಯಾವಾಗಲೂ ಖಂಡಿಸಬಹುದಾಗಿದೆ ಮತ್ತು ವಾದಿಯು ವ್ಯಾಜ್ಯಕಾರಣದ ಬಗ್ಗೆ ತಪ್ಪಾಗಿ ವಾದಿಸಿದರು ಎಂದು ಕೂಡಾ ತೋರಿಸಬಹುದಾಗಿದೆ.ಈ ಪ್ರಯತ್ನವನ್ನು ಸಾಕ್ಷಿಯನ್ನು ದಾಖಲಿಸಿದ ನಂತರ ಮಾತ್ರ ಮಾಡಬೇಕೆ ಹೊರತು ಪ್ರಾರಂಭದಲ್ಲಿ ಅಲ್ಲ. ಇದಲ್ಲದೆ ಆತನು, ಒಪ್ಪಂದದ ಅನುಸರಣೆಯಲ್ಲಿ ಮತ್ತು ತನ್ನ ಸ್ವಾಧೀನವನ್ನು ಕಾಪಾಡಿಕೊಳ್ಳಲು ವಾದಿಯು ಸ್ವಾಧೀನವನ್ನು ಮುಂದಿಟ್ಟಿದ್ದು, ಆತನು ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಬಹುದಾಗಿದೆ ಎಂದು ವಾದಿಸಿದ್ದಾನೆ.ವಾದಪತ್ರದಲ್ಲಿ, ಪ್ರತಿವಾದಿಗಳು ಮಾಡಿದ್ದ ಹಸ್ತಕ್ಷೇಪದ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿರುವುದರಿಂದ, ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಪಟ್ಟಂತೆ, ವಾದಪತ್ರವು ಚಾಲಿಯಲ್ಲಿರುತ್ತದೆ.ವಾದಪತ್ರವನ್ನು ತಿರಸ್ಕರಿಸುವಲ್ಲಿ ವಿಚಾರಣಾ ನ್ಯಾಯಾಲಯವು ತಪ್ಪನ್ನು ಎಸಗಿದೆ.ತನ್ನ ವಾದಗಳಿಗೆ ಬೆಂಬಲವಾಗಿ, ಆತನು ವರದಿ ಮಾಡಿದ ಕುಲದೀಪ್ ಸಿಂಗ್ ಪಥಾನಿಯ -ವಿರುದ್ಧ- – ಅಕ್ರಮ್ ಸಿಂಗ್ ಜಾಲ್ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾನೆ.ಚ

7. ದಾವೆ ಸಲ್ಲಿಸುವ ಮೊದಲು, ವಾದಿಯು ಕೇವಲ ನಿರ್ಬಂಧಕಾಜ್ಞೆಗಾಗಿ ದಾವೆಯನ್ನು ಸಲ್ಲಿಸಿದ್ದನು ಮತ್ತು ಅದನ್ನು ವಜಾಮಾಡಲಾಗಿತ್ತು ಹಾಗೂ ತರುವಾಯದ ದಾವೆಯು ಅವಧಿ ಮೀರಿದ್ದಾಗಿದೆ ಎಂದು ಪ್ರತಿವಾದಿ ಸಂಖ್ಯೆ 08 ಇವರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.ಇದಲ್ಲದೆ, ಅವರು ಮಾರಾಟದ ಒಪ್ಪಂದದ ಆಧಾರದ ಮೇಲೆ ಮಾತ್ರ ವಾದಿಯು ಹಕ್ಕನ್ನು ಕ್ಲೇಮು ಮಾಡಿರುತ್ತಾರೆ ಎಂದು ವಾದಿಸಿದ್ದಾರೆ.ಅವರು ಸ್ವತ್ತಿನ ನಿರುಪಾಧಿಕ ಮಾಲೀಕರಾಗದೇ ಇರುವಾಗ,ದಿನಾಂಕ: 14.03.2008 ರ ಕ್ರಯಪತ್ರವು ತನಗೆ ಬಂಧನಕಾರಿಯಲ್ಲವೆಂಬ ಪರಿಣಾಮಕ್ಕೆ ಆತನು ಘೋಷಣಾತ್ಮಕ ಪರಿಹಾರವನ್ನು ಕೋರಲಾಗುವುದಿಲ್ಲ.ಆತನ ಪ್ರಕಾರ, ವಾದಪತ್ರವು ವ್ಯಾಜ್ಯಕಾರಣವನ್ನು ವ್ಯಕ್ತಪಡಿಸುವುದಿಲ್ಲ ಹಾಗೂ ದಾವೆಯು ಅವಧಿ ಮೀರಿದ್ದಾಗಿದೆ; ಮತ್ತು ಆದ್ದರಿಂದ ಪ್ರಶ್ನಿತ ಆದೇಶದಲ್ಲಿ ಯಾವುದೇ ಅಸ್ಥಿರತೆ ಇಲ್ಲ.

8. ನಾನು ವಾದಾಂಶಗಳನ್ನು ಪರಿಗಣಿಸಿದ್ದೇನೆ.ಕುಲ್ದೀಪ್ ಸಿಂಗ್ ಪಥಾನಿಯಾ (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ VII ನೇ ಕ್ರಮಾದೇಶದ 11 ನೇ ನಿಯಮದ ಅಡಿಯಲ್ಲಿ ಒಂದು ಅರ್ಜಿಯನ್ನು ಕುರಿತು ನಿರ್ಣಯಿಸುವಾಗ ಅನುಸರಿಸಬೇಕಾದ ತತ್ವಗಳನ್ನು ಪುನರುಚ್ಚರಿಸಿದೆ.ವಾದ ಪತ್ರದಲ್ಲಿ ಸಲ್ಲಿಸಿದ ಸಮರ್ಥನೆಗಳನ್ನು ಮಾತ್ರ ದಂಡ ಪ್ರಕ್ರಿಯಾ ಸಂಹಿತೆಯ VII ನೇ ಕ್ರಮಾದೇಶದ 11 ನೇ ನಿಯಮದ ಅಡಿಯಲ್ಲಿ ಒಂದು ಅರ್ಜಿಯನ್ನು ಕುರಿತು ನಿರ್ಣಯಿಸುವುದಕ್ಕಾಗಿ ಪರಿಗಣಿಸಬೇಕು ಮತ್ತು ಇದು ಒಂದು ಸುಸ್ಥಾಪಿತ ತತ್ವವಾಗಿದೆ.ವರದಿ ಮಾಡಿದ ಐ. ಅರಿವಂದನ್ದಮ್ -ವಿರುದ್ಧ-ಟಿ.ವಿ.ಸತ್ಯಪಾಲ್ ಮತ್ತು ಇನ್ನೊಬ್ಬರು . ಎಐಆರ್ 1977 ಎಸ್ಸಿ 2421 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ತೀರ್ಪನ್ನು ಉಲ್ಲೇಖಿಸುವುದು ಉಪಯುಕ್ತ ಎಂದು ನನ್ನ ಅಭಿಪ್ರಾಯವಾಗಿದೆ.ಅದು ಈ ಕೆಳಗಿನಂತಿದೆ:

"5. ಪದೇ ಪದೇ ಮತ್ತು ಪಶ್ಚಾತ್ತಾಪವಿಲ್ಲದೆ ನ್ಯಾಯಾಲಯದ ಪ್ರಕ್ರಿಯೆಯನ್ನು ಅತಿಯಾಗಿ ದುರುಪಯೋಗ ಪಡಿಸಿಕೊಳ್ಳಲು ಆಶ್ರಯಿಸಿದ್ದಕ್ಕಾಗಿ ಅರ್ಜಿದಾರರನ್ನು ಖಂಡಿಸುವುದರಲ್ಲಿ ನಮಗೆ ಕಿಂಚಿತ್ತೂ ಹಿಂಜರಿಕೆ ಇಲ್ಲ. ಉಚ್ಚ ಚ ನ್ಯಾಯಾಲಯದ ತೀರ್ಪಿನಲ್ಲಿ ಕಂಡುಬಂದ ಸಂಗತಿಗಳ ನಿರೂಪಣೆಯಿಂದ, ದಾವೆಯು ಈಗ ಪ್ರಥಮ ಮುನ್ಸಿಫ್ ನ್ಯಾಯಾಲಯ, ಬೆಂಗಳೂರು ಇದರ ಮುಂದೆ ಇತ್ಯರ್ಥದಲ್ಲಿರುವುದು ವಾದಪತ್ರಗಳನ್ನು ಸ್ವೀಕರಿಸುವುದರಲ್ಲಿ ಕಾನೂನಿನ ವಿವೇಚನಾಧಿಕಾರಗಳು ಕಣ್ಣಿಗೆ ಕಾಣುವಂತೆ ದುರುಪಯೋಗ ಎಂಬುದು ಅತ್ಯಂತ ಸ್ಪಷ್ಟ.ಅನುಸರಿಸಲು ಒಂದು ಸ್ಪಷ್ಟ ಹಕ್ಕು ಬಹಿರಂಗಪಡಿಸದಿರುವ ಅರಿವಿನಲ್ಲಿ, ಏನೆಂದರೆ ಒಂದು ದಾವೆ ಹೂಡುವ ಸ್ಪಷ್ಟ ಹಕ್ಕನ್ನು ವ್ಯಕ್ತಪಡಿಸದಿರುವ ಭಾವದಲ್ಲಿ ವಾದದ ಔಪಚಾರಿಕ ಓದುವಿಕೆಯಲ್ಲಿದೆ.ಅರ್ಥಪೂರ್ಣ ಓದುವಿಕೆಯ ಆಧಾರದ ಮೇಲೆ ಅದು ಸ್ಪಷ್ಟವಾಗಿ ಕೇಶಕರವಾಗಿದ್ದರೆ ಅಥವಾ ಗುಣಾರ್ಹತೆಯಿಲ್ಲದ್ದಾಗಿದ್ದರೆ ಅದರಲ್ಲಿ ಉಲ್ಲೇಖಿಸಿದ ಕಾರಣವನ್ನು ಪೂರೈಸಲಾಗಿದೆ ಎಂಬುದನ್ನು ನೋಡುವ ಕಾಳಜಿ ವಹಿಸಿ ಸಿಪಿಸಿಯ VII ನೇ ಕ್ರಮಾದೇಶದ 11 ನೇ ನಿಯಮದ ಅಡಿಯಲ್ಲಿ ತಮ್ಮ ಅಧಿಕಾರವನ್ನು ಚಲಾಯಿಸಬೇಕು ಎಂಬುದನ್ನು ಮಾನ್ಯ ಮುನ್ಸಿಫ್ ಅವರು ನೆನಪು ಮಾಡಿಕೊಳ್ಳಬೇಕು ಮತ್ತು ಚಾಣಾಕ್ಷನಾಗಿದ್ದರೆ, ಕರಡು ವ್ಯಾಜ್ಯ ಕಾರಣದ ಭ್ರಮೆಯನ್ನು ಸೃಷ್ಟಿಸಿದೆ ಎಂದು ತಿಳಿದುಕೊಂಡು, ಸಿ.ಪಿ.ಸಿ.ಯ X ನೇ ಕ್ರಮಾದೇಶದ ಅಡಿಯಲ್ಲಿ, ಕೂಲಂಕಷವಾಗಿ ಪಕ್ಷಕಾರನನ್ನು ಪರೀಕ್ಷಿಸುವ ಮೂಲಕ ಪ್ರಥಮ ಸುನಾವಣೆಯಲ್ಲೇ ಅದನ್ನು ಚಿವುಟಿ ಹಾಕಬೇಕು.ಒಬ್ಬ ಕ್ರಿಯಾಶೀಲ ನ್ಯಾಯಾಧೀಶನು ಬೇಜವಾಬ್ದಾರಿಯುತ ಕಾನೂನು ದಾವೆಗಳಿಗೆ ಉತ್ತರವಾಗುತ್ತಾನೆ.ಪ್ರಾರಂಭದ ಹಂತದಲ್ಲಿಯೇ ಸುಳ್ಳು ವ್ಯಾಜ್ಯವನ್ನು ಸ್ಥಗಿತಗೊಳಿಸುವಂತಾಗಲು ಮೊದಲ ಪ್ರಯತ್ನದಲ್ಲೇ ಪಕ್ಷಕಾರನನ್ನು ಪರೀಕ್ಷಿಸುವುದರ ಬಗ್ಗೆ ವಿಚಾರಣಾ

ನ್ಯಾಯಾಲಯವು ಅವಶ್ಯವಾಗಿ ಒತ್ತಾಯಿಸಬೇಕು.ಅಂಥವರಿಗೆ ಉತ್ತರಿಸಲು ದಂಡ ಸಂಹಿತೆಯು ಕೂಡಾ ( ಅ. XI) ತಕ್ಕ ಸಾಧನವಾಗಿದ್ದು, ಅಂಥವರ ವಿರುದ್ಧ ಅದನ್ನು ಬಳಸಬೇಕು.ಈ ಮೊಕದ್ದಮೆಯಲ್ಲಿ, ಮಾನ್ಯ ನ್ಯಾಯಾಧೀಶರು, ಮಹಾತ್ಮ ಗಾಂಧೀಜಿಯವರ ಹತ್ಯೆ ಕುರಿತು ಜಾರ್ಜ್ ಬರ್ನಾರ್ಡ್ ಅವರು ನೀಡಿದ " ತುಂಬಾ ಒಳ್ಳೆಯವನಾಗಿರುವುದು ಅಪಾಯಕಾರಿ " ಎ ಂ ಬ ಹೇಳಿಕೆಯನ್ನು ತಮಗೆ ಅನುಕೂಲವಾಗುವ ಂ ತೆ ಅರಿತುಕೊಳ್ಳಬೇಕು."

9. ಈ ತತ್ವಗಳ ಹಿನ್ನೆಲೆಯಲ್ಲಿ, ಒ.ಎಸ್.ಸಂಖ್ಯೆ: 27217/2011 ರಲ್ಲಿನ ವಾದವನ್ನು ಓದಿದರೆ, ವಾದಿಯು ಇನ್ನೂ ಸ್ವತ್ತಿನ ಮಾಲೀಕನಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.ಆತನುದಿನಾಂಕ: 14.3.2008 ರ ಮಾರಾಟದ ಒಪ್ಪಂದದ ಮತ್ತು ನೋಂದಾಯಿತ ಮುಖಾರನಾಮೆ ಆಧಾರದ ಮೇಲೆ ದಾವೆ ನಿಗದಿತ ಸ್ವತ್ತಿನ ಸ್ವಾಧೀನ ಹೊಂದಿರುವುದಾಗಿ ಕ್ಲೇಮು ಮಾಡಿರಬೇಕು.ಪ್ರತಿವಾದಿಸಂಖ್ಯೆ: 7 ಈತನು,ದಿನಾಂಕ: 14.3.2008 ರ ನೊಂದಾಯಿತ ಕ್ರಯ ಪತ್ರದ ಮೂಲಕ ಸ್ವತ್ತನ್ನು ಖರೀದಿಸಿದ್ದಾನೆ.ನಿಸ್ಸಂದೇಹವಾಗಿ, ವಾದಿಯ ಹೆಸರಿನಲ್ಲಿನ ಒಪ್ಪಂದವು ಸಮಯಕ್ಕೆ ಮೊದಲೆ ಘಟಿಸಿದ್ದಾಗಿದೆ.ಆದುದರಿಂದ, ನಿರ್ದಿಷ್ಟ ಪಾಲನೆಗಾಗಿ ದಾವೆಯನ್ನು ಹೂಡುವುದು ವಾದಿಗೆ ಲಭ್ಯವಿರುವ ಪರಿಹಾರವಾಗಿತ್ತು.ಮೊದಲನೆಯದಾಗಿ, ವಾದಿಯು ಕೋರಿದ ಘೋಷಣಾತ್ಮಕ ಪರಿಹಾರವನ್ನು ಆತನಿಗೆ ನೀಡಲಾಗದು, ದಾವೆ ನಿಗದಿತ ಸ್ವತ್ತಿನ ಮೇಲೆ ವಾದಿಯು ಇನ್ನೂ ಸ್ವಾಮ್ಯವನ್ನು ಆರ್ಜಿಸದೆ ಅಂಥ ಘೋಷಣೆಯನ್ನು ಕ್ಲೇಮು ಮಾಡಲು ಆತನಿಗೆ ಹಕ್ಕಿರುವುದಿಲ್ಲ.

10. ದಾವೆ ನಿಗದಿತ ಸ್ವತ್ತನ್ನು ಪರಭಾರೆ ಮಾಡುವುದರಿಂದ ಅಥವಾ ಪೂರ್ವಾವಧಿ ಹೊರಿಸುವುದರಿಂದ, ಪ್ರತಿವಾದಿಸಂಖ್ಯೆ: 7 ಈತನನ್ನು ನಿರ್ಬಂಧಿಸಲು ಶಾಶ್ವತ ನಿರ್ಬಂಧ ಡಿಗ್ರಿಯನ್ನು ವಾದಿಯು ಸಹ ಕ್ಲೇಮು ಮಾಡಿಕೊಳ್ಳಲಾಗದು.ಪ್ರತಿವಾದಿಸಂಖ್ಯೆ: ಈತನು ಸ್ವತ್ತಿನ ಮೇಲೆ ಮಾಲೀಕತ್ವವನ್ನು ಆರ್ಜಿಸಿ, ಆತನು ಸ್ವತ್ತಿನ ನಿರುಪಾಧಿತ ಮಾಲೀಕನಾಗಿದ್ದಾನೆ.ಸ್ವತ್ತಿನ ಮಾಲೀಕತ್ವದ ಹಕ್ಕು, ಮಾರುವ ಅಥವಾ ಪೂರ್ವಾದಿಯ ಸೃಜಿಸುವ ಹಕ್ಕನ್ನು ಒಳಗೊಳ್ಳುತ್ತದೆ.ಸ್ವತ್ತನ್ನು ನಿರುಪಾಧಿಕವಾಗಿ ವರ್ಗಾವಣೆ ಮಾಡಿದಾಗ, ವಿಲೆ ಮಾಡುವ ಹಕ್ಕನ್ನು ಒಳಗೊಂಡಿರುವ ಅದರ ಎಲ್ಲ ಕಾನೂನುಸಮ್ಮತ ಘಟನೆಗಳೊಂದಿಗೆ ಅದನ್ನು ವರ್ಗಾಯಿಸಬೇಕು.ಸ್ವತ್ತು ವರ್ಗಾವಣೆ ಅಧಿನಿಯಮದ 10 ನೇ ಪ್ರಕರಣವು ವರ್ಗಾವಣೆ ಮೇಲಿನ ನಿರ್ಬಂಧವನ್ನು ನಿಷೇಧಿಸುತ್ತದೆ.ಆದುದರಿಂದ, ಪರಭಾರೆ ಮಾಡುವುದನ್ನು ನಿಷೇಧಿಸುವ ಅಥವಾ ನಿರ್ಬಂಧಿಸುವ ಸ್ವರೂಪದಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯ ಡಿಕೆಯನ್ನು ನೀಡಿದರೆ, ಅದು ಸ್ವತ್ತು ವರ್ಗಾವಣೆ ಅಧಿನಿಯಮದ 10 ನೇ ಪ್ರಕರಣದ ಯಥಾರ್ಥತೆಗೆ ವಿರುದ್ಧವಾಗುತ್ತದೆ.ಆದರೆ, ದಾವೆಯ ವಿಲೆ ಇತ್ಯರ್ಥದಲ್ಲಿರಿಸಿ ಪರಭಾರೆಯನ್ನು ನಿಷೇಧಿಸುವ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವು ವ್ಯವಹರಣೆಗಳ ಬಾಹುಳ್ಯವನ್ನು ತಪ್ಪಿಸುವುದು ಅಗತ್ಯವಾಗುವುದರಿಂದ, ಅಂಥ ಆದೇಶವನ್ನು ವಿನಾಯಿತಿ ಎಂದು ಹೇಳಬಹುದಾಗಿರುತ್ತದೆ.

11. ಆದುದರಿಂದ, ವಾದಿಗೆ ಅರ್ಥಗರ್ಭಿತ ಓದುವಿಕೆ ನೀಡಿದರೆ, ವಾದಪತ್ರದಲ್ಲಿ ಆತನು ಕೋರಿದಂಥ ಪರಿಹಾರಗಳನ್ನು ಕ್ಲೇಮು ಮಾಡುವ ಯಾವುದೇ ಹಕ್ಕನ್ನು ವಾದಿಯು ಪಡೆಯುವುದಿಲ್ಲ.ವಿಚಾರಣೆ ನಡೆಸುವುದು ವ್ಯರ್ಥ ಪ್ರಯತ್ನವಾಗುತ್ತದೆ.ಈ ದೃಷ್ಟಿಯಿಂದ ನೋಡಿದಾಗ, ವಾದಪತ್ರವು ವ್ಯಾಜ್ಯಕಾರಣವನ್ನು ವ್ಯಕ್ತಪಡಿಸುವುದಿಲ್ಲ ಎಂದು ಬಹಳ ಸ್ಪಷ್ಟವಾಗಿ ಹೇಳಬಹುದಾಗಿದೆ; ಕಾಲ ಪರಿಮಿತಿಯ ಅಂಶವನ್ನು ಕಡೆಗಣಿದಿದ್ದಾಗ್ಯೂ, ಅರ್ಜಿಯ ನಿರ್ವಹಣೆ ಮಾಡುವಂತದ್ದಲ್ಲ.

12. ಆದುದರಿಂದ, ಪ್ರಶ್ನಿತ ಆದೇಶವು ಅಸ್ಥಿರತೆಗೆ ಎಡೆಗೊಡುವುದಿಲ್ಲ ಎಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ.ಮನವಿಯನ್ನು ವಜಾ ಮಾಡಲಾಗಿದೆ.ಆದಾಗ್ಯೂ, ಈ ಆದೇಶವು, ಕಾನೂನಿನಡಿಯಲ್ಲಿ ಲಭ್ಯವಿರುವ ಸೂಕ್ತ ಪರಿಹಾರವನ್ನು ಕೋರಲು ವಾದಿಯ ದಾರಿಗೆ ಅಡ್ಡ ಬರುವುದಿಲ್ಲ.